# ಕರ್ನಾಟಕ ವಿಧಾನ ಪರಿಷತ್ತು
## 133ನೇ ಅಧಿವೇಶನ
## (ಮುಂದುವರೆದ ಉಪವೇಶನಗಳು)
## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಗುರುವಾರ, ದಿನಾಂಕ: 09ನೇ ನವೆಂಬರ್, 2017**

*****

**ಸಂಖ್ಯೆ: 36**

**ಬೆಳಗಾವಿ ಅಧಿವೇಶನದ ಸಂಬಂಧ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳ ಮಾಹಿತಿಗಾಗಿ**

01. ನೂರ ಮೂವತ್ತ ಮೂರನೆಯ ಮುಂದುವರೆದ ಉಪವೇಶನವು ದಿನಾಂಕ: 13ನೇ ನವೆಂಬರ್ 2017 ರಿಂದ 24ನೇ ನವೆಂಬರ್ 2017ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವುದರಿಂದ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮ 2ರಂತೆ ವಿಧಾನ ಪರಿಷತ್ತಿನ ಸಚಿವಾಲಯವು ಶನಿವಾರ ದಿನಾಂಕ:11ನೇ ನವೆಂಬರ್ 2017ರಿಂದ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಕಾರ್ಯನಿರ್ವಹಿಸಲಿದೆ.

02. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಬೆಳಗಾವಿ ಹಾಗೂ ಹುಬ್ಬಳ್ಳಿ ನಗರಗಳಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಲಾಗಿದೆ. **ಬೆಳಗಾವಿಯಲ್ಲಿ ವಾಸ್ತವ್ಯ ಕಲ್ಪಿಸಿರುವ ಮಾನ್ಯ ಸದಸ್ಯರುಗಳಿಗೆ ದಿನವೊಂದಕ್ಕೆ ರೂ.2,500/-ರಂತೆ ಹಾಗೂ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಕಲ್ಪಿಸಿರುವ ಮಾನ್ಯ ಸದಸ್ಯರುಗಳಿಗೆ ದಿನವೊಂದಕ್ಕೆ ರೂ.5,000/-ರಂತೆ 'ಸಾರಿಗೆ ಭತ್ಯೆ'ಯನ್ನು** ಮಾನ್ಯ ಸದಸ್ಯರುಗಳ ವಾಸ್ತವ್ಯ ಮತ್ತು ಹಾಜರಾತಿಯ ಆಧಾರದ ಮೇಲೆ ಪಾವತಿಸಲು ತೀರ್ಮಾನಿಸಲಾಗಿದೆ. ಆದುದರಿಂದ, ಮಾನ್ಯ ಸದಸ್ಯರುಗಳೆ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಳ್ಳಲು ಕೋರಲಾಗಿದೆ.

03. ಅಧಿವೇಶನ ಸಂದರ್ಭದ ವಸತಿ ಸೌಕರ್ಯದ ಮಾಹಿತಿಯನ್ನು **ಶ್ರೀ ವೆಂಕನಗೌಡ ಪಾಟೀಲ್, ಉಪ ಕಾರ್ಯದರ್ಶಿ (ಮೊಬೈಲ್ ದೂರವಾಣಿ ಸಂಖ್ಯೆ:9880538471)** ಹಾಗೂ **ಶ್ರೀ ಬಿ.ಎ. ಮೊಹಿನುದ್ದೀನ್, ಅಧೀನ ಕಾರ್ಯದರ್ಶಿ (ಮೊಬೈಲ್ ದೂರವಾಣಿ** ಸಂಖ್ಯೆ:9844330409) ಇವರುಗಳ ಮುಖೇನ ಪಡೆದುಕೊಳ್ಳಲು ಕೋರಲಾಗಿದೆ.

04. ಅಧಿವೇಶನದಲ್ಲಿ ಪಾಲ್ಗೊಳ್ಳುವ ಮಾನ್ಯ ಸದಸ್ಯರ ಜೊತೆಯಲ್ಲಿ ಆಗಮಿಸುವ ಆಪ್ತ ಸಹಾಯಕರುಗಳು ಹಾಗೂ ಭದ್ರತಾ ಸಿಬ್ಬಂದಿಗಳಿಗೆ ಬೆಳಗಾವಿಯಲ್ಲಿ ವಸತಿ ಹಾಗೂ ಸಾರಿಗೆ ಸೌಕರ್ಯವನ್ನು ಪ್ರತ್ಯೇಕವಾಗಿ ಒದಗಿಸಲು ಸಾಧ್ಯವಾಗುವುದಿಲ್ಲವೆಂದು, ಮಾನ್ಯ ಸದಸ್ಯರುಗಳು ತಮ್ಮೊಂದಿಗೆ ಕರೆತರುವ ಆಪ್ತ ಸಿಬ್ಬಂದಿಗಳಿಗೆ ಜಿಲ್ಲಾಡಳಿತವು ತಿಳಿಸಿರುವ ಹಿನ್ನಲೆಯಲ್ಲಿ ತಾವೇ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಿಕೊಳ್ಳಲು ಕೋರಲಾಗಿದೆ.